ಬೇಡ, ಅನಂತಪದ್ಮನಾಭನನ್ನು ನಿಮ್ಮ ಸ್ನೇಹಿತನನ್ನಾಗಿ ಮಾಡಿಕೊಳ್ಳಿ. ಆತನ ಜೊತೆಗೆ ಇರಿ ಆತ ನಿಮ್ಮ ಜೊತೆ ಇರುತ್ತಾನೆ. ಚಿಕ್ಕಪ್ಪ ನಾನು ನಿಮಗೆ ಹೇಳುವುದು ಇಷ್ಟೇ. ಕಳಿಂಗದ ಜೊತೆ ಯಾವ ಕಾರಣಕ್ಕೂ ಯುದ್ಧ ಬೇಡ, ನಿಮ್ಮ ಭವದ ಹಂಗು ಇನ್ನೂ ಹರಿದಿಲ್ಲ. ಮತ್ತೆ ಅನಾಹುತವನ್ನು ಹೆಗಲಿಗೆ ಹಾಕಿಕೊಳ್ಳಬೇಡಿ’ ಎಂದು ಎಚ್ಚರಿಸಿದ್ದ.

ಆದರೆ, ಇಲ್ಲಿ ಎಲ್ಲಿ ನೋಡಿದರೂ ರಕ್ತಮಾಂಸದ ಗುಡ್ಡೆಗಳು. ಶಿವನೇ... ಏನಿದು ಅನಾಹುತ. ಮಹಾರಾಜನ ಎಂಟು ಜನ ಭಂಟರು, ವಿಕಾರವಾಗಿ ಸತ್ತು ಬಿದ್ದಿದ್ದರು. ತನ್ನ ಒಂದು ಲಕ್ಷ ಸೈನ್ಯ, ಅನಂತ ಪದ್ಮನಾಭನ ಎರಡು ಲಕ್ಷ ಸೈನ್ಯ ನಾಶವಾಗಿ ಹೋಗಿತ್ತು. ಯುದ್ಧದಲ್ಲಿ ಎರಡೂ ಕಡೆಯವರು ಸೋತಿದ್ದರು.

ಕ್ಷಣ ಹೊತ್ತಿನಲ್ಲಿ ಅಸಾಂಧಿಮಿತ್ರೆ ಮತ್ತು ಮಹಾವಿಸ್ಮಯ ಶುಂಗ ಜಯದ ಧ್ವಜ ಹಿಡಿದು ರಥದಲ್ಲಿ ಅಶೋಕ ಮಹಾರಾಜರು ಇದ್ದ ಸ್ಥಳಕ್ಕೆ ಬಂದರು. ಅಶೋಕರಿಗೂ ಇಬ್ಬರನ್ನು ನೋಡಿ ಬಹಳ ಸಿಟ್ಟು ಬಂತು. ‘ಏನು ಮಾಡಿದಿರಿ ಅನಾಹುತ. ನಾವು ಸಂಧಿಗಾಗಿ ನಿಮ್ಮನ್ನು ಕಳುಹಿಸಿದರೆ ನೀವು ಇಲ್ಲಿ ನರಕವೇ ಸೃಷ್ಟಿಸಿದ್ದೀರಿ’ ಎಂದರು. ಅಸಾಂಧಿಮಿತ್ರೆ, ‘ಪ್ರಭು ನಾವು ಗೆದ್ದಿದ್ದೇವೆ. ಅನಂತಪದ್ಮನಾಭನನ್ನು ಸೆರೆ ಹಿಡಿದಿದ್ದೇವೆ, ಅವರ ಸೈನ್ಯವನ್ನು ನಾಶ ಮಾಡಿದ್ದೇವೆ’ ಎಂದು ಸಂತಸದಿಂದಲೇ ಹೇಳಿದಳು.

ಅಶೋಕನಿಗೆ ದುಃಖ ಉಮ್ಮಳಿಸಿತು. ‘ನಾವೂ ಸೋತಿದ್ದೇವೆ. ಅರ್ಧ ಅಕ್ಷೋಹಿಣಿ ಸೈನ್ಯವನ್ನು ಕಳೆದುಕೊಂಡಿದ್ದೇವೆ. ಅವರ ಒಂದು ಅಕ್ಷೋಹಿಣಿ ಸೈನ್ಯ ನಾಶವಾಗಿ ಹೋಗಿದೆ. ನನಗೆ ಮುಖ ತೋರಿಸಬೇಡಿ ಇಲ್ಲಿಂದ ಹೊರಡಿ’ ಎಂದು ಅನಂತ ಪದ್ಮನಾಭನನ್ನು ಬಿಡುಗಡೆಗೊಳಿಸಿ ಮತ್ತೆ ಪಾಟಲೀಪುತ್ರಕ್ಕೆ ಮರಳಿದರು.

ಅಶೋಕ ಸಾಮ್ರಾಟರಿಗೆ ಯಾಕೋ ಪಥ ಬದಲಾವಣೆ ಆಗುತ್ತಿದೆ ಅನ್ನಿಸಿತು. ಪಾಟಲೀಪುತ್ರದ ಅರಮನೆ ತಲುಪಿದರು. ಲಕ್ಷಾಂತರ ಸೈನಿಕರ ಸಾವು, ಹೆಣ್ಣುಮಕ್ಕಳ ಆಕ್ರಂದನ, ಮಕ್ಕಳ ಚೀರಾಟ, ನರಳಾಟಗಳೆಲ್ಲ ತನ್ನ ಎದೆಯ ಮೇಲೆ ಕುಣಿದಂತಾಯಿತು. ಇತ್ತ ನಿಗ್ರೋಧ, ತನ್ನ ತಮ್ಮ, ತಂಗಿಯರಾದ ಮಹೀಂದ್ರ, ಸಂಘಮಿತ್ರೆಯರನ್ನು ಕೂಡಿಸಿಕೊಂಡು, ಅಭಿದಮ್ಮ ಪೀಠಿಕೆಯ ಮನಃಪಟಲದ ಸ್ವಾಭಾವಿಕ ಅಭಿವ್ಯಕ್ತಿಯ ಬಗ್ಗೆ ಚರ್ಚಿಸುತ್ತಿದ್ದ. ಮತ್ತು ಅಣ್ಣ ಕುನಾಲ ತನ್ನ ಹೆಂಡತಿಯಾದ ಕಾಂಚನಮಾಲಾಳೊಂದಿಗೆ ಅರಮನೆ ಸೇರಿದ್ದ. ಅದಮ್ಯ ಸಂಗೀತಗಾರನಾಗಿದ್ದ ಕುನಾಲ್ ಬೌದ್ಧ ಪೀಠಿಕೆಗಳಿಗೆ ರಾಗ ಹಾಕಿ, ಚಂದವಾಗಿ ಹಾಡುವವನಾಗಿದ್ದ.

ಅಸಾಂಧಿಮಿತ್ರೆ ದಯಾ ನದಿಯಲ್ಲಿ ಜಿಗಿದಳೆಂದು ಮೀನುಗಾರರೇ ಬದುಕಿಸಿದರೆಂದು ಸುದ್ದಿ ಬಂತು. ಮಹಾರಾಜರಿಗೆ ಈ ಭವರೋಗದಿಂದ ಮುಕ್ತವಾಗಬೇಕೆಂಬ ಹಂಬಲ ಉತ್ಕಟವಾಯಿತು. ಸಂಜೆ ಅರಮನೆಯ ಮುಂದೆ ನಿಗ್ರೋಧನೇ ಅಗ್ಗಿಷ್ಟಿಕೆಯ ಅಗ್ನಿ ಹೊತ್ತಿಸಿದ. ಅದರೊಳಗೆ ಅಶೋಕ ಚಕ್ರವರ್ತಿಯ ಕಟ್ಟಿಗೆಯ ಮೂರ್ತಿಯನ್ನು ಹಾಕಿ ಸುಡಲಾಯಿತು. ಆಮೇಲೆ ಅವರ ತಾಯಿ ಕೊಟ್ಟ, ಅವರಪ್ಪ ಸುಶೀಮನ ಚಿತಾಭಸ್ಮ ಅದರಲ್ಲಿ ಹಾಕಲಾಯಿತು. ಆಮೇಲೆರಡನ್ನು ಸೇರಿಸಿ ಗಂಗಾನದಿಯಲ್ಲಿ ಚಿತಾಭಸ್ಮವನ್ನು ವಿಸರ್ಜಿಸಲಾಯಿತು. ಅರಮನೆಯಲ್ಲಿ ‘ಬುದ್ಧಂ ಶರಣಂ ಗಚ್ಛಾಮಿ’ ಎನ್ನುವ ತ್ರಿರತ್ನ ಧಮ್ಮಪದ ಎಲ್ಲಾ ಕಡೆಯಿಂದಲೂ ಅನುರಣಿಸಹತ್ತಿತು.

ನಿಗ್ರೋಧ ಧಮ್ಮನ ಜೊತೆ ಅಶೋಕ ದೇವನಾಂಪ್ರಿಯನಾಗುವತ್ತ ದಾಪುಗಾಲು ಇಡಹತ್ತಿದ್ದ. ●

